International Journal of Kannada Research 2024; 10(4): 01-05




International Journal of Kannada Research
www.kannadajournal.com

ISSN: 2454–5813
IJKR 2024; 10(4): 01-05
© 2024 IJKR
www.kannadajournal.com
Received: 01-07-2024
Accepted: 06-08-2024

**ನವೀನ್ ಕುಮಾರ್ ಆರ್. ಎ**
ಸಂಶೋಧನಾ ವಿದ್ಯಾರ್ಥಿ ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ನವನಿಹಾಳ, ಕಲಬುರ್ಗಿ, ಕರ್ನಾಟಕ, ಭಾರತ

**Corresponding Author:**
**ನವೀನ್ ಕುಮಾರ್ ಆರ್. ಎ**
ಸಂಶೋಧನಾ ವಿದ್ಯಾರ್ಥಿ ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ನವನಿಹಾಳ, ಕಲಬುರ್ಗಿ, ಕರ್ನಾಟಕ, ಭಾರತ

# ಶ್ರೀ ಮಡಿಯಾಲ ನಾರಾಯಣ ಭಟ್ - ಹಿಂದೂ ಮಿಷನರಿ ಸಂಸ್ಥೆ

**ನವೀನ್ ಕುಮಾರ್ ಆರ್. ಎ**

**ಪೀಠಿಕೆ**

ಶ್ರೀ ಮಡಿಯಾಲ ನಾರಾಯಣ ಭಟ್ಟರ ಈ ಲೇಖನವು 1974ರಲ್ಲಿ ಮೊದಲ ಮುದ್ರಣವನ್ನು ಕಂಡಿದೆ. ಶ್ರೀ ಸತ್ಯಸಾಯಿ ಸನಾತನ ಸಾರಥಿ ಟ್ರೈನಿಂಗ್ ಸೆಂಟರ್ ಅಳಿಕೆ ಇವರು ಇದನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿನ ಎಲ್ಲ ವಿಷಯಗಳು ಮಡಿಯಾಲ ನಾರಾಯಣಭಟ್ಟರ ಸ್ವಯಂ ಚಿಂತನೆಗಳಾಗಿವೆ. ಅವರ ಆದರ್ಶ, ವಿಚಾರ, ಕನಸ್ಸುಗಳನ್ನೆಲ್ಲಾ ಲೇಖನದ ರೂಪವಾಗಿ 'ಸೇವಾಮೃತ' ಪತ್ರಿಕೆಯಲ್ಲಿ ಪ್ರಕಟಣೆ ಆಗಿವೆ. ನಂತರ ಆ ಲೇಖನಗಳನ್ನೆಲ್ಲ ಒಟ್ಟುಗೂಡಿಸಿ 'ವಿರಾಟ್ ರೂಪದ ಹಿಂದೂ ಮಿಷನರಿ ಸಂಸ್ಥೆ' ಎಂಬ ಹೆಸರಿನಲ್ಲಿ ಸಣ್ಣ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಮಹಾನ್ ಕೃತಿಯ ಹಿಂದಿನ ಉದ್ದೇಶ ಹಿಂದೂ ಮಿಷನರಿಯ ಸೇವಾಸಂಸ್ಥೆಯನ್ನು ಸ್ಥಾಪಿಸುವುದೇ ಆಗಿದೆ. ಭಾರತ ದೇಶದ ಪುನರುತ್ಥಾನಕ್ಕಾಗಿ ತನ್ನ ತನು, ಮನ, ಧನವನ್ನು ಸಂಪೂರ್ಣವಾಗಿ ದೇಶಕ್ಕಾಗಿ ಅರ್ಪಿಸಿ ಮುಂದಿನ ಯುವ ಪೀಳಿಗೆಗೆ ಶಿಕ್ಷಣದ ಮೂಲಕ ಅವರನ್ನು ದೇಶದ ಸೇವಕರಾಗಿ ರೂಪಿಸಲು ಪಣತೊಟ್ಟು ಶಿಕ್ಷಣ ಕ್ರಾಂತಿಯನ್ನೇ ಪ್ರಾರಂಭಿಸಿದ ಶ್ರೀ ಮಡಿಯಾಲ ನಾರಾಯಣಭಟ್ಟರು ತಮ್ಮ ಭಾರತದ ಪುನರುತ್ಥಾನದ ಕನಸನ್ನು ಈ ಲೇಖನದ ಮೂಲಕ ವ್ಯಕ್ತಪಡಿಸಿದ್ದಾರೆ.

ಕ್ರಿಶ್ಚಿಯನ್ ಮಿಷನರಿಗಳ ತ್ಯಾಗ, ಸೇವೆಗಳಿಂದ ಮನಸೋತ ಶ್ರೀ ಮಡಿಯಾಲ ನಾರಾಯಣ ಭಟ್ಟರು ಭಾರತದ ಏಳಿಗೆಗಾಗಿ ಹಿಂದೂ ಮಿಷನರಿ ಸಂಸ್ಥೆಯನ್ನು ಪ್ರಾರಂಭಿಸಬೇಕು. ಅದರಲ್ಲಿ ಸಹಸ್ರಾರು ಯುವಕರು ಮಿಷನರಿಗಳಾಗಿ ಸೇರಿ ಭಾರತದ ಏಳಿಗೆಗಾಗಿ ದುಡಿಯಬೇಕು ಎಂಬುದು ಅವರ ಸಂಕಲ್ಪವಾಗಿತ್ತು. ಆದ್ದರಿಂದ ಈ ಒಂದು ಲೇಖನದಲ್ಲಿ ಹಿಂದೂ ಸಂಘಟನೆಯನ್ನು ಕಟ್ಟಲು ಸಾಧ್ಯವೇ ಎಂಬುವುದನ್ನು ಅವರು ಕುರಿತು ಚರ್ಚಿಸಿದ್ದಾರೆ. ಮಡಿಯಾಲ ನಾರಾಯಣ ಭಟ್ಟರ ಅಭಿಪ್ರಾಯದಲ್ಲಿ ರಾಷ್ಟ್ರದ ಏಳಿಗೆಗಾಗಿ ಅಥವಾ ಧರ್ಮದ ಉದ್ಧಾರಕ್ಕಾಗಿ ದುಡಿಯುವ ಹಾಗು ಮಿಷನರಿಗಳಾಗಿ ಬದುಕಲು ನಿರ್ಧರಿಸುವ ಯುವಕರನ್ನು ಕುರಿತು ಯಾವ ರೀತಿಯ ಗುಣಗಳನ್ನು ಹೊಂದಿರಬೇಕು ಮಿಷನರಿ ಜೀವನ ವಿಧಾನ ಯಾವ ರೀತಿಯಲ್ಲಿ ಇರಬೇಕು ಎಂಬುವುದಾಗಿದೆ. ಮಿಷನರಿಗಳಾಗ ಬಯಸುವವರು ಸಂಪೂರ್ಣವಾದ ತ್ಯಾಗ, ಮನೋಭಾವದಿಂದ ಬ್ರಹ್ಮಚಾರಿಗಳಾಗಿ ಯಾವುದೇ ಸಾಂಸಾರಿಕ ಜೀವನಕ್ಕೆ ಒಳಗಾಗದೆ ಪ್ರಾಪಂಚಿಕ ಸುಖ-

ಜೀವನಗಳಿಗೆ ಮರುಳಾಗದೆ ತಮ್ಮ ಪೂರ್ಣ ಜೀವನವನ್ನು ರಾಷ್ಟ್ರದ ಏಳಿಗೆಗಾಗಿ ದುಡಿಯಬೇಕು, ಭಾರತದಂತಹ ರಾಷ್ಟ್ರದಲ್ಲಿ ತ್ಯಾಗಕ್ಕೆ ಕೊರತೆಯಿಲ್ಲ, ಆದರೆ ಹಿಂದೂ ಧರ್ಮದಂತಹ ಪವಿತ್ರವಾದ ಧರ್ಮದಲ್ಲಿ ತ್ಯಾಗ ಮಾಡುವುದರಿಂದ ಮಿಷನರಿ ವ್ಯವಸ್ಥೆ ಸ್ಥಾಪನೆಯಾಗುವುದು ಎಂದರೆ ಕಷ್ಟ.

ಸ್ವತಂತ್ರ ಭಾರತದ ಸಂದರ್ಭದಲ್ಲಿ ದೇಶದ ಅಂದಿನ ಆಂತರಿಕ ಸಮಸ್ಯೆಗಳನ್ನು ಕಂಡು ಭಾರತದ ಒಳ ಭದ್ರತೆ, ಸಂಸ್ಕೃತಿ, ಧರ್ಮದ ರಕ್ಷಣೆಗೆ ಒಂದು ಮಿಷನರಿ ಸಂಘ ಅಗತ್ಯವಾಗಿದೆ ಎಂದು ಮನಗಂಡು ಸಂಘವನ್ನು ಪ್ರಾರಂಭಿಸಲು ತೀರ್ಮಾನಿಸಿದರು. ಅವತ್ತಿನ ಕಾಲದಲ್ಲಿ ಶಿಕ್ಷಣ ಕ್ಷೇತ್ರವು ವಿನಾಶದ ಹಾದಿಯನ್ನು ಹಿಡಿದಿದ್ದು ಆಧುನಿಕ ಶಿಕ್ಷಣ ಜಾರಿಯಾದ ನಂತರ ಜನರಲ್ಲಿ ಸಂಸ್ಕೃತಿ, ಧಾರ್ಮಿಕಜಾಗೃತಿ, ರಾಷ್ಟ್ರಪ್ರೇಮ, ನಿಧಾನಗತಿಯಲ್ಲಿ ಕಡಿಮೆಯಾಗತೊಡಗಿತು. ರಾಷ್ಟ್ರಕ್ಕಾಗಿ ದುಡಿಯುವ ನಾಯಕರು ಅಪರೂಪವಾಗಿ ಭ್ರಷ್ಟಾಚಾರ ವ್ಯವಸ್ಥೆಯಿಂದ ಸಂಸ್ಕೃತಿ ಅವನತಿಯ ಹಾದಿ ಹಿಡಿದಿತ್ತು. ಆಗಾಗಿ ಇವೆಲ್ಲ ಸಮಸ್ಯೆ ಬಗೆಹರಿಯಬೇಕಾದರೆ ಇಂದಿನ ಯುವಕರು ಅಗತ್ಯವಾಗಿ ಒಂದಾಗಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ಶ್ರೀ ಮಡಿಯಾಲ ನಾರಾಯಣ ಭಟ್ಟರು ಹೊಂದಿದ್ದರು. “ಇದಕ್ಕಾಗಿ ಲಕ್ಷಾಂತರ ಮಂದಿ ತ್ಯಾಗಜೀವಿಗಳ ಬಳಗ ಮಾತ್ರವಲ್ಲ ಸೈನ್ಯವನ್ನೇ ರಚಿಸಬೇಕಾಗಿದೆ. ಅವರು ವೈವಾಹಿಕ ಜೀವನಕ್ಕೆ ಪ್ರವೇಶಿಸದೆ, ಚಾರಿತ್ರ್ಯವನ್ನು ಶುದ್ಧಿಯನ್ನಿಟ್ಟುಕೊಂಡು, ಪರಮಾತ್ಮನ ಚಿಂತನೆ ಮಾಡುವ ಜೊತೆಗೆ ಜೀವನವನ್ನು ಪೂರ್ಣವಾಗಿ ಈ ಮಹಾಕಾರ್ಯಕ್ಕಾಗಿ ಸಮರ್ಪಿಸಿಕೊಂಡು ಇದೇ ಭಗವಂತನ ಪೂಜೆಯೆಂದು ಭಾವಿಸುತ್ತ, ದುಡಿಯುತ್ತಿರಬೇಕಾಗಿದೆ,[1]

ಲೋಕ ಸೇವಾ ಸಂಸ್ಥೆ ಎಂಬ ತ್ಯಾಗಜೀವಿಗಳ ಸಂಘವನ್ನು ಸ್ಥಾಪಿಸಿದ ಶ್ರೀ ಮಡಿಯಾಲ ನಾರಾಯಣಭಟ್ಟರು ಸ್ಫೂರ್ತಿಯುತ ಯುವಕರನ್ನು ಸೇರಿಸಿಕೊಂಡು ಸಣ್ಣ ಮಟ್ಟದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದರು. ಈ ಸೇವೆಯನ್ನು ರಾಷ್ಟ್ರಮಟ್ಟದಲ್ಲಿ ಸಲ್ಲಿಸಬೇಕು ಎಂಬ ಸಂಕಲ್ಪದಿಂದ ಹಿಂದೂ ಮಿಷನರಿ ಸಂಸ್ಥೆ ಕಟ್ಟುವುದು ಅಗತ್ಯ ಎಂದು ಅವರು ನಂಬಿದ್ದರು. ಭಾರತದಲ್ಲಿ ಕ್ರೈಸ್ತ ಸಮುದಾಯದವರ ಸಂಖ್ಯೆ ಕಡಿಮೆ ಇದ್ದರು ಅವರ ಸೇವೆ ಹಾಗು ಧರ್ಮ ಪ್ರಸಾರ ಕಾರ್ಯ ಅತ್ಯಂತ ಭರದಿಂದ ಸಾಗಿತ್ತು. ದೇಶದ ಉದ್ದಗಲಕ್ಕೂ ಹಲವಾರು ಶಾಲಾ ಕಾಲೇಜುಗಳು, ಆಸ್ಪತ್ರೆಗಳು, ಅನಾಥಾಲಯಗಳನ್ನು ಸ್ಥಾಪಿಸಿ ಸೇವೆ ಸಲ್ಲಿಸುತ್ತಿರುವ ಹಲವಾರು ಮಿಷನರಿಗಳನ್ನು ಕಾಣುತ್ತೇವೆ. ಬೌದ್ಧಧರ್ಮದಲ್ಲಿ ಬೌದ್ಧ ಸನ್ಯಾಸಿಗಳನ್ನು ನಾವು ಕಾಣಬಹುದು. ಆದರೆ ಹಿಂದೂ ಧರ್ಮದಲ್ಲಿ ಮಾತ್ರ ಮಿಷನರಿ ಜೀವನ ಎಂದರೆ ಭಯಭೀತರಾಗುವುದು ಉಂಟು ಯಾರು ಸಹ ತ್ಯಾಗ ಜೀವನ ನಡೆಸಲು ಇಷ್ಟಪಡುವುದಿಲ್ಲ. ಯಾರೋ ಕೆಲವು ಮಂದಿ ಮಾತ್ರ ಧರ್ಮದ ಉಳಿವಿಗಾಗಿ, ರಾಷ್ಟ್ರಕ್ಕಾಗಿ ಸೇವೆ ಸಲ್ಲಿಸಬೇಕು ಎಂಬ ಮಹಾಸಂಕಲ್ಪದಿಂದ ಸನ್ಯಾಸಿಗಳಾಗುವುದನ್ನು ಕಾಣಬಹುದು.

ಸ್ವಾಮಿ ವಿವೇಕಾನಂದರು ಪ್ರಾರಂಭಿಸಿದ ‘ರಾಮಕೃಷ್ಣ ಮಿಷನ್’ ಎಂಬ ಸಂಸ್ಥೆ ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಕಡುಬಡವರಿಗೆ ದೀನ-ದಲಿತರಿಗೆ ಪ್ರೇಮವನ್ನು ಹರಿಸಿ ಅವರನ್ನು ಸನ್ಮಾರ್ಗದಲ್ಲಿ ತರಬೇಕೆಂದು ಕನಸನ್ನು ಕಂಡಿದ್ದರು. ಆದರೆ ಸ್ವಾಮಿ ವಿವೇಕಾನಂದರ ಅಕಾಲಿಕ ಮರಣದ ನಂತರ ಆ ಸಂಸ್ಥೆಯು ತನ್ನ ಗುರಿಯನ್ನು ಮರೆತು ಸನ್ಯಾಸಿಗಳನ್ನು ಸೇರಿಸಿಕೊಂಡು ಆಧ್ಯಾತ್ಮಿಕ ಪಥದಲ್ಲಿ ಮಾತ್ರ ಮುನ್ನುಗುತ್ತಿದೆ. ಆದರೆ ಹಿಂದೂ ಧರ್ಮದಲ್ಲಿ ಸನ್ಯಾಸಿ ದೀಕ್ಷೆ ತೆಗೆದುಕೊಂಡು ಸ್ವಯಂ ಸಾಧನೆ ಮಾಡಿದರೆ ಸಾಲದು ಧರ್ಮದ ರಕ್ಷಕರಾಗಿ ಸೇವೆ ಸಲ್ಲಿಸಬೇಕು, ಬಡಜನದ ಮಧ್ಯೆ ಜೀವಿಸುತ್ತಾ ಅವರ ದೈಹಿಕ ಬೇಡಿಕೆಗಳನ್ನು ಪೂರೈಸುತ್ತಾ ಅವರಲ್ಲಿ ಧಾರ್ಮಿಕ ಜಾಗೃತಿ ಮೂಡಿಸಿ ಸಾರ್ಥಕ ಪ್ರಜೆಗಳಾಗಿ ಮಾಡಬೇಕು. ವಿವಿಧ ಧರ್ಮಗಳಲ್ಲಿ ಮಿಷನರಿ ವ್ಯವಸ್ಥೆ ಇದ್ದಂತೆ ಹಿಂದೂ ಧರ್ಮದಲ್ಲಿ ಮಿಷನರಿ ವ್ಯವಸ್ಥೆ ಸಾಧ್ಯವೇ ಹಿಂದುಗಳಿಗೆ ತ್ಯಾಗದ ಮನಸ್ಸಿದೆಯೇ ಎಂಬುವುದೇ ಇಲ್ಲಿನ ಪ್ರಶ್ನೆ. ಬೌದ್ಧ, ಜೈನ, ಮುಸ್ಲಿಂ, ಹಲವು ಧರ್ಮಗಳು ಮಿಷನರಿ ವ್ಯವಸ್ಥೆಯನ್ನು ಕಟ್ಟಿಕೊಂಡು ಶ್ರಮಿಸುತ್ತಿದ್ದಾರೆ. ಹಿಂದೂಗಳು ಅಂತಹ ತ್ಯಾಗದ ಮನಸ್ಸನ್ನು ಹೊಂದಬೇಕು ಇಲ್ಲದಿದ್ದರೆ ಉಳಿಗಾಲವಿಲ್ಲ. ಹಿಂದೂಧರ್ಮದಲ್ಲಿ ತ್ಯಾಗಜೀವನ ಮಾಡಿ ಆಧ್ಯಾತ್ಮಿಕ ಪಥದಲ್ಲಿ ಸಾಗುವುದೆಂದರೆ ಕುಟುಂಬದ ಹಿರಿಯರು ಒಪ್ಪುವುದಿಲ್ಲ. ಅಂತಹ ಮಹಾನ್ ಕಾರ್ಯದಲ್ಲಿ ತೊಡಗುವುದು ಎಂದರೆ ಭಯಭೀತರಾಗುವರು ವಿವಾಹ ಆಗದೆ ಇರುವುದು ಹೇಗೆ ಮೋಕ್ಷದ ಪ್ರಾಪ್ತಿಗೆ ವಿವಾಹ ಆಗಲೇಬೇಕು ಎಂಬ ದೊಡ್ಡ ಮೂಢನಂಬಿಕೆ ಹಿಂದೂ ಧರ್ಮದಲ್ಲಿ ಮೊದಲಿನಿಂದಲೂ ಇದೆ.

ಕ್ರೈಸ್ತ ಮಿಷನರಿಗಳನ್ನು ನೋಡುವುದಾದರೆ ಹಲವು ಮಿಷನರಿಗಳು ಅವಿವಾಹಿತರಾಗಿ ತಮ್ಮ ಧರ್ಮಪ್ರಚಾರ ಕಾರ್ಯದಲ್ಲಿ ನಿರತರಾಗಿರುತ್ತಾರೆ. “ಒಬ್ಬ ಕ್ರೈಸ್ತ ಯುವಕನು

ಪ್ರಾಯಪ್ರಬುದ್ಧತೆ ಪಡೆದು ತಾನು ಮಿಷನರಿ ಜೀವನ (ತ್ಯಾಗ ಜೀವನ) ಮಾಡುತ್ತೇನೆ ಎಂದು ಬಯಸಿದರೆ ಹೆತ್ತವರು ಅದನ್ನು ತಪ್ಪಿಸುವುದಿಲ್ಲ. ಬದಲಿಗೆ ಅವನನ್ನು ಹಾರ್ದಿಕವಾಗಿ ಅಭಿನಂದಿಸುತ್ತಾರೆ. ಅವನ ಧ್ಯೇಯ ಪೂರ್ತಿಯಾಗಲಿ ಎಂದು ಮನಸ್ವಿಹರುಸುತ್ತಾರೆ. ತಮ್ಮ ಕುಲ ಪಾವನವಾಯಿತು, ಮನೆ ಬೆಳಗಿತು ಎಂದು ಆನಂದ ಪಡುತ್ತಾರೆ".[2] ಕೆಲವು ಮಂದಿ ತುಂಬಾ ಶ್ರದ್ಧೆಯಿಂದ ಜೀವನ ಸಾಗಿಸಬಹುದು ಕೆಲವರು ಕಾಲ ಕ್ರಮೇಣ ದಾರಿ ತಪ್ಪಲೂಬಹುದು ಸಹಜವಾಗಿ ಲೈಂಗಿಕ ಕ್ರಿಯೆಯ ಆಸಕ್ತಿಗೆ ಒಳಗಾಗಿ ಅನೈತಿಕ ಮಾರ್ಗವನ್ನು ಹಿಡಿಯಬಹುದು. ಅಂತಹವರು ಮದುವೆಯಾಗುವುದೇ ಉತ್ತಮ ಎಂಬುವುದು ಮಡಿಯಾಲ ನಾರಾಯಣ ಭಟ್ಟರ ಅಭಿಪ್ರಾಯ. ಅಂದರೆ ಮಡಿಯಾಲ ನಾರಾಯಣ ಭಟ್ಟರು ಗೃಹಸ್ಥ ಧರ್ಮವನ್ನು ಪಾಲಿಸಿದವರು ಮಿಷನರಿ ಜೀವನಕ್ಕೆ ಅನರ್ಹರು ಎಂದು ಹೇಳುವುದಿಲ್ಲ. ತ್ಯಾಗ ಜೀವನ ಮಾಡುವವರು ತಮ್ಮ ಸಂಪೂರ್ಣ ಸಮಯವನ್ನು ಸಮಾಜದ ಒಳಿತಿಗಾಗಿ ನೀಡಬೇಕಾಗುತ್ತದೆ. ಗೃಹಸ್ಥರಿಗೆ ಅದು ಸಾಧ್ಯವಾಗುವುದಿಲ್ಲ ಆದ್ದರಿಂದ ಮಿಷನರಿ ಆಗ ಬಯಸುವ ವ್ಯಕ್ತಿ ಅವಿವಾಹಿತನಾಗಿಯೇ ಉಳಿಯುವುದು ಒಳ್ಳೆಯದು ಎಂದು ಹೇಳುತ್ತಾರೆ.

ಶ್ರೀ ಮಡಿಯಾಲ ನಾರಾಯಣ ಭಟ್ಟರ ಪ್ರಕಾರ ಮಿಷನರಿಯಾಗಲು ಬಯಸುವವನು ಸಹ ಗೃಹಸ್ಥ ಜೀವನವನ್ನು ಸ್ವೀಕರಿಸಬಹುದು, ಆದರೆ ತಮ್ಮ ಸಂಪೂರ್ಣ ಸಮಯವನ್ನು ರಾಷ್ಟ್ರದ ಒಳಿತಿಗಾಗಿ ನೀಡಲು ಸಾಧ್ಯವಿಲ್ಲ. ಅವರು ಗೃಹಸ್ಥ ಧರ್ಮ ತಪ್ಪು ಎಂದು ಹೇಳುವುದಿಲ್ಲ. ಸಾಮಾನ್ಯವಾಗಿ ಗೃಹಸ್ಥ ಧರ್ಮವನ್ನು ಸ್ವೀಕರಿಸಿದ ಮಿಷನರಿಯು ಸ್ವಾರ್ಥ, ಆಸೆ, ಲೋಪಗಳಿಗೆ ಒಳಗಾಗಿ ತಮ್ಮ ನಿಜ ಕಾರ್ಯವನ್ನು ಮರೆಯುವಂತೆ ಮಾಡುತ್ತದೆ. ಅದ್ದರಿಂದ ಮಿಷನರಿ ಆಗಬಯಸುವವನು ರಾಷ್ಟ್ರಮಾತೆಯ ಚರಣಸೇವಕನಾಗಬೇಕಾದರೆ ಬ್ರಹ್ಮಚಾರಿಯಾಗಿ ಜೀವನ ಸಾಗಿಸುವುದೇ ಒಳಿತು ಎಂಬುದು ಮಡಿಯಾಲ ನಾರಾಯಣಭಟ್ಟರ ಅಭಿಪ್ರಾಯವಾಗಿತ್ತು. ಈ ಒಂದು ಲೇಖನದಲ್ಲಿ ರಾಷ್ಟ್ರದ, ಧರ್ಮದ ಬಗ್ಗೆ ಮಡಿಯಾಲ ನಾರಾಯಣ ಭಟ್ಟರಿಗೆ ಇದ್ದಂತಹ ಕಾಳಜಿಯನ್ನು ಕಾಣಬಹುದು.

ತ್ಯಾಗ ಜೀವನ ನಡೆಸುವವರು ಯಾರದೋ ಬಲವಂತಕ್ಕೆ ಅಥವಾ ಬೇರೆ ಕಾರಣಗಳಿಂದ ಒಂಟಿ ಜೀವನ ಮಾಡುವವರು ತ್ಯಾಗಿಗಳಾಗಲು ಸಾಧ್ಯವಿಲ್ಲ. ಆಧ್ಯಾತ್ಮಿಕ ಪ್ರಗತಿ, ರಾಷ್ಟ್ರಪ್ರೇಮ, ವಿಶ್ವ ಪ್ರೇಮಗಳನ್ನೂ ಹೊಂದಿರುವವರು ಮಾತ್ರ ರಾಷ್ಟ್ರಕ್ಕಾಗಿ ಜೀವನಾರ್ಪಣಾ ಮಾಡುವವರು ಮಾತ್ರ ತ್ಯಾಗ ಜೀವನ ನಡೆಸಬಹುದು. ರಾಷ್ಟ್ರದ ಅಥವಾ ಧರ್ಮದ ಹಿತಕ್ಕಾಗಿ ತ್ಯಾಗಜೀವನ ಮಾಡಬಯಸುವವರನ್ನು ನೇಮಿಸಿಕೊಳ್ಳುವಾಗ ಅತ್ಯಂತ ನಿಷ್ಠಾವಂತರನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಅವಿವಾಹಿತರಾದವರು ಮುಂದೆ ಅನೈತಿಕ ಮಾರ್ಗಕ್ಕೂ ಇಳಿಯುವ ಸಂದರ್ಭವೂ ಬರಬಹುದು ಆದ್ದರಿಂದ ಮಿಷನರಿಗಳನ್ನೂ ಆಯ್ಕೆ ಮಾಡುವಾಗ ಕೆಲವು ನಿಯಮಗಳನ್ನು ಇಟ್ಟಿಕೊಂಡು ಆಯ್ಕೆ ಮಾಡಬೇಕಾಗುತ್ತದೆ. ಹಿಂದೂ ಮಿಷನರಿ ಸಂಸ್ಥೆಯನ್ನು ಕಟ್ಟಬೇಕಾದರೆ ಸಂಸ್ಥೆಯು ತನ್ನದೇ ಆದ ರೂಪರೇಷಗಳನ್ನು ಹೊಂದಿರಬೇಕಾಗುತ್ತದೆ. ಭಾರತದ ಯುವಕರು ರಾಷ್ಟದ ಸ್ಥಿತಿಗತಿಯನ್ನು ನೋಡಿ ಸಹಸ್ರಾರು ಯುವಕರು ನಾಡಿನ ಒಳಿತಿಗಾಗಿ ತಮ್ಮ ಜೀವನವನ್ನು ಅರ್ಪಿಸಬೇಕು. ಸೇವಾ ಸಂಸ್ಥೆಯನ್ನು ಸ್ಥಾಪಿಸುವುದು ಸುಲಭ ಆದರೆ ಅದನ್ನು ಮುನ್ನೆಡೆಸಿಕೊಂಡು ಹೋಗುವುದು ಬಹಳ ಕಷ್ಟ, ಅದಕ್ಕೆ ಸಮರ್ಥ ನಾಯಕತ್ವಬೇಕು, ಅದಕ್ಕೆ ಬೇಕಾದಂತಹ ಸವಲತ್ತುಗಳು, ಪ್ರೋತ್ಸಾಹಧನ, ಅಗತ್ಯವಾಗಿಬೇಕು, ತ್ಯಾಗಪೂರ್ಣವಾಗಿ ನಿಂತ ಯುವಜನರಿಗೆ ತರಬೇತಿ ವ್ಯವಸ್ಥೆ ಮಾಡಬೇಕು, ಮೊದಲು ನಿಧಾನವಾಗಿ ಸಂಸ್ಥೆಯನ್ನು ಪ್ರಾರಂಭಿಸಬೇಕು, ಸೇವಾಮನೋಭಾವವುಳ್ಳ ಯುವಕರನ್ನು ಸೇರುವಂತೆ ಪ್ರೋತ್ಸಾಹಿಸಬೇಕು, ಯಾವುದೇ ಅಥವಾ ಯಾರದೋ ಒತ್ತಾಯಕ್ಕೆ ಯುವಕರು ಸೇರಬಾರದು, ರಾಷ್ಟ್ರಕ್ಕಾಗಿ ಸೇವೆ ಸಲ್ಲಿಸುವವರು ನಿಸ್ವಾರ್ಥವಾಗಿ ಯಾವುದೇ ಫಲಪೇಕ್ಷೆ ಇಲ್ಲದೆ ಸೇವೆ ಸಲ್ಲಿಸಬೇಕು, ನಿಧಾನವಾಗಿ ಸಂಸ್ಥೆಯ ನಿಸ್ವಾರ್ಥಸೇವೆಯನ್ನು ಮನಗಂಡು ಇತರ ಯುವಕರು ಬಂದು ಸೇರುವರು.

"ಇಂತಹ ವಿರಾಟ್ ಉದ್ದೇಶ ತಾಳಿರುವ ಒಂದು ಮಿಷನರಿ ಸಂಸ್ಥೆಯಿದ್ದರೆ ಹಾಗೂ ಅವರಲ್ಲಿ ತ್ಯಾಗಪೂರ್ಣ ಯುವಜನರ ಅಂತರಂಗಕ್ಕೆ ಬೇಕಾದ ತರಬೇತಿಯನ್ನೂ, ಸ್ಫೂರ್ತಿ ನೀಡಬಲ್ಲ ವ್ಯವಸ್ಥೆಯಿದ್ದರೆ ಸಹಸ್ರಾರು ಮಂದಿ ಅದರಲ್ಲಿ ಸೇರಿ ಜೀವನವನ್ನು ಪಾವನವನ್ನಾಗಿ ಮಾಡಿ ರಾಷ್ಟ್ರಕ್ಕೆ ಇಂದು ಅತ್ಯಂತ ಅವಶ್ಯವಾಗಿರುವ ಅನುಪಮವಾದ ಸೇವೆಯನ್ನು ಸಲ್ಲಿಸಲು ಮುಂದೆ ಬಂದಾರು ಎಂಬುದರಲ್ಲಿ ಸಂಶಯವಿಲ್ಲ".[3] ಶ್ರೀಮಡಿಯಾಲ ನಾರಾಯಣಭಟ್ಟರ ಪ್ರಕಾರ

ಮಿಷನರಿಯಾಗಬಯಸುವವನು ಕೆಲವು ಸದ್ಗುಣಗಳನ್ನು ಹೊಂದಿರಬೇಕಾಗುತ್ತದೆ. ಪ್ರಾಮಾಣಿಕತೆ, ದೈವಭಕ್ತಿ, ರಾಷ್ಟ್ರಭಕ್ತಿ, ಮೈತ್ರಿಭಾವ, ತ್ಯಾಗಜೀವನದ ಬಗ್ಗೆ ಬಲವಾದ ಅಪೇಕ್ಷೆ, ಇವೆಲ್ಲವನ್ನು ಬೆಳಸಿಕೊಳ್ಳಬೇಕು. ಸಂಸ್ಥೆಯು ಕೆಲವು ನೀತಿ-ನಿಯಮಗಳನ್ನು ಸಹ ಹೊಂದಿರಬೇಕಾಗುತ್ತದೆ. ಆ ನಿಯಮಗಳನ್ನು ಪಾಲಿಸಿದರೆ ಮಾತ್ರ ಮಿಷನರಿ ಆಗಲು ಸಾಧ್ಯ. ಹಾಗೆಂದು ಈ ಗುಣಗಳಿವೆ ಎಂದೊಡನೆಯೇ ತ್ಯಾಗ ಜೀವನಕ್ಕೆ ಪೂರ್ಣ ಅರ್ಹತೆ ಬಂತು ಎಂದೆನ್ನುವುದು ಸರಿಯಲ್ಲ. ಇನ್ನೂ ಕೆಲವೊಂದು ದೈವೀ ಗುಣಗಳಿದ್ದವರು ಮಾತ್ರವೇ ಇಂತಹ ಪವಿತ್ರ ಜೀವನಕ್ಕೆ ಕಾಲಿಡಲು ಅರ್ಹರಾಗುತ್ತಾರೆ.

1. "ಹಿರಿಯರಿಗೆ ವಿಧೇಯನಾಗಿರಬೇಕು
2. ಆಡಂಬರದ ಜೀವನದ ಮೇಲೆ ಪ್ರೇಮವಿರಬಾರದು, ಸರಳ ಜೀವನವನ್ನು ನಡೆಸಲು ಸಿದ್ದರಿರಬೇಕು.
3. ಪರಿಶುದ್ಧ ಮನಸ್ಸಿರಬೇಕು, ಅಹಂಕಾರ ಇರಬಾರದು.
4. ಪರಮಾತ್ಮನ ಮೇಲೆ ಭಕ್ತಿ ಅಗಾಧವಾಗಿರಬೇಕು.
5. ರಾಷ್ಟ್ರಕ್ಕಾಗಿ ದಿನ-ದಲಿತರ ಏಳಿಗೆಗಾಗಿ ಎಲ್ಲ ಸುಖ-ಸಂಪತ್ತನ್ನು ತೊರೆದು ನಿಸ್ವಾರ್ಥದಿಂದ ಜೀವಿಸಬೇಕು.
6. ಯಾವುದೇ ವಿಷಯದಲ್ಲಿ ಚಪಲತೆ ಇರಬಾರದು.

ಹೀಗೆ ಹಲವು ನಿಯಮಗಳನ್ನು ಪಾಲಿಸಿದವರು ಮಾತ್ರ ಮಿಷನರಿಯಲ್ಲಿ ಪಾಲ್ಗೊಳ್ಳಲು ಸಾಧ್ಯ ವಾಗುತ್ತದೆ. ಹಿಂದೂ ಮಿಷನರಿ ಆಗ ಬಯಸುವವನು ಯಾವಾಗಲು ಪರಮಾತ್ಮನ ಚಿಂತೆ ಮತ್ತು ಭಗವಂತನಲ್ಲಿ ಅನನ್ಯವಾದ ಪ್ರೇಮ ಹೊಂದಿರಬೇಕು. "ತ್ಯಾಗ ಜೀವನದ ಅಭ್ಯರ್ಥಿಗಳು ಕಡಿಮೆಯೆಂದರೆ 6ವರ್ಷಗಳ ತನಕ ಸಂಸ್ಕೃತ, ವೇದಾಂತ, ಭಗವದ್ಗೀತೆ, ಬ್ರಹ್ಮಸೂತ್ರ ಧರ್ಮಗ್ರಂಥ, ರಾಮಾಯಣ, ಮಹಾಭಾರತ, ಪುರಾಣಗಳ ಅಧ್ಯಯನ ಮಾಡಬೇಕು".[4] ಕನಿಷ್ಠ ವಿದ್ಯಾಭ್ಯಾಸ ಹೊಂದಿರಬೇಕು. ವೈವಾಹಿಕ ಜೀವನ ಅಥವಾ ಲೈಂಗಿಕ ಜೀವನದ ಮೇಲೆ ಆಸಕ್ತಿ ಭೋಗವಿಲಾಸ ಜೀವನ ನಡೆಸಲು ಆಸಕ್ತಿ ಹೊಂದಿರುವವರಿಗೆ ಮಿಷನರಿ ಆಗಲು ಅರ್ಹರಾಗುವುದಿಲ್ಲ. ಮಿಷನರಿ ಆಗಬಯಸುವವನು ಯಾವುದೇ ಸಂಬಳದ ಅಪೇಕ್ಷೆ ಇಟ್ಟುಕೊಳ್ಳಬಾರದು, ಆದರೆ ಜೀವನಕ್ಕೆ ಬೇಕಾದ ಆಹಾರ, ವಸತಿ, ಬಟ್ಟೆ ಎಲ್ಲವನ್ನು ಸಂಸ್ಥೆಯೇ ಒದಗಿಸಬೇಕು. ತ್ಯಾಗಜೀವನ ನಡೆಸುವವರು ಆಶ್ರಮದಲ್ಲಿಯೇ ಇರಬೇಕು ಸ್ವತಂತ್ರವಾಗಿ ಒಂಟಿ ಜೀವನ ನಡೆಸಲು ಯೋಚಿಸಬಾರದು.

"ತ್ಯಾಗಜೀವನ ಮಾಡುವವರು ಹಿಂದೆ ಬಣ್ಣಿಸಿದ ಗುಣಗಳನ್ನು ಬೆಳಸಿಕೊಳ್ಳುತ್ತ ಶಿಕ್ಷಣ ಪಡೆಯುವದಲ್ಲದೆ ಬ್ರಹ್ಮಚರ್ಯ, ವಿಧೇಯತನ, ನಿರಪೇಕ್ಷತೆ, ದೈವಚಿಂತನೆ, ವಿಶ್ವಪ್ರೇಮ, ರಾಷ್ಟ್ರನಿಷ್ಠೆಯೇ ಮೊದಲಾದ ಗುಣಗಳನ್ನು ಪ್ರಧಾನವಾಗಿಟ್ಟುಕೊಂಡು, ತಮ್ಮ ಮಾರ್ಗದರ್ಶಕರ ಆದೇಶಕ್ಕನುಸಾರ ನಿಸ್ವಾರ್ಥ ಸೇವಾಜೀವನ ಮಾಡುತ್ತ ಸದಾಕಾಲವು ತಾಯ್ನಾಡಿಗಾಗಿ ದೇಹಾರ್ಪಣ ಮಾಡಲು ಸಿದ್ಧರಾಗಿರಬೇಕು".[5] ರಾಷ್ಟ್ರದ ಬೃಹತ್ ಪರಿವರ್ತನೆಯನ್ನು ಸಾಧಿಸಲು ತ್ಯಾಗಜೀವಿಗಳ ವಿರಾಟ್ ಸೈನ್ಯವೇ ಬೇಕಾಗಿದೆ. ದೇಶದ ಗಡಿಯನ್ನು ರಕ್ಷಿಸಲು ಯೋಧರಿದ್ದಂತೆ ದೇಶದ ಒಳಗಿನ ಸಮಸ್ಯೆಗಳನ್ನು ಬಗೆಹರಿಸಲು ಬೃಹತ್ ಯುವ ಸೈನ್ಯವೇ ಬೇಕು. ಇಂತಹ ಸಮಸ್ಯೆಗಳನ್ನು ಬಗೆಹರಿಸಲು ವಿವಿಧ ರೀತಿಯ ಸಂಸ್ಥೆಗಳು ತಮ್ಮನ್ನು ಧರ್ಮ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸಹಸ್ರಾರು ಸಂಖ್ಯೆಯಲ್ಲಿ ಮಿಷನರಿಗಳನ್ನು ಸಿದ್ಧಪಡಿಸಬೇಕು ಆಗ ಮಾತ್ರ ಹಿಂದೂ ಧರ್ಮದ ರಕ್ಷಣೆಯ ಕಾರ್ಯ ಆಗುತ್ತದೆ. "ತ್ಯಾಗಜೀವಿಗಳು ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬರಬೇಕು. ಅಲ್ಲಿ ವಿದ್ಯಾಭ್ಯಾಸ ವಿದ್ಯಾರ್ಥಿಗಳನ್ನು ಅತ್ಯಂತ ಪ್ರೇಮದಿಂದ ನೋಡಿಕೊಂಡು ಅವರಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ನೈತಿಕ,ಆಧ್ಯಾತ್ಮಿಕ, ತರಬೇತಿ ನೀಡಬೇಕು. ಅವರು ಭಾರತೀಯ ಸಂಸ್ಕೃತಿಯ ಆಧಾರದಲ್ಲಿ ಜೀವನ ನಡೆಸುವಂತೆ ಕಲಿಸಿಕೊಡಬೇಕು"[6]. ಇಂತಹ ವಿರಾಟ್ ಸಂಸ್ಥೆಯ ರಚನೆಯಾದರೆ ರಾಷ್ಟ್ರದ ಸಕಲ ಸಮಸ್ಯೆಗಳು ಪರಿಹರಿಸಿ, ರಾಜಕಾರಣವನ್ನು ಶುದ್ದೀಕರಿಸಬಹುದು. ಈ ತನಕ ಭಾರತ ದೇಶದಲ್ಲಿ ಇಂತಹ ಸಂಸ್ಥೆ ಪ್ರಾರಂಭವಾಗಿಲ್ಲ. ಮಿಷನರಿ ಸಂಸ್ಥೆಯನ್ನು ರಚಿಸಲು ಹಿಂದೂ ಸಮಾಜವೇ ತೀವ್ರ ಆತಂಕವನ್ನೊಡ್ಡುತ್ತಿದೆ.

ಹೀಗೆ ಭಾರತದ ಹಿಂದೂ ಸಮಾಜದ ಪುನರುತ್ಥಾನಕ್ಕಾಗಿ, ಇಂತಹ ಸಂಸ್ಥೆಯ ಸ್ಥಾಪನೆಗೆ ಬೆಂಬಲ, ಪ್ರೋತ್ಸಾಹ, ಪೋಷಣೆ, ಅಗತ್ಯವಾಗಿ ಬೇಕಾಗಿದೆ. ಇಲ್ಲವಾದಲ್ಲಿ ಭಾರತದ ಭವ್ಯ ಸಂಸ್ಕೃತಿಯು ಅವನತಿಯ ಆದಿಯನ್ನು ಕಾಣುತ್ತದೆ. ಪ್ರಾರಂಭದಲ್ಲಿ ಮಿಷನರಿಗಳ ಮೇಲೆ ಮಾನಾಪಮಾನ, ಅಪವಾದ, ಅಪಪ್ರಚಾರಗಳು ಬರಬಹುದು ಮಿಷನರಿಗಳು

ಎದೆಗುಂದದೆ ತಮ್ಮ ವ್ಯಕ್ತಿತ್ವವನ್ನು ಸಂಶಯಾತೀತವಾಗಿ ಇಟ್ಟುಕೊಂಡು ಎಲ್ಲವನ್ನು ಸಮಾನವಾಗಿ ಭಾವಿಸಿಕೊಂಡು ಅಪಾರವಾದ ಪ್ರೇಮದಿಂದಲೇ ಸ್ವೀಕರಿಸಬೇಕು ನಿದಾನವಾಗಿ ಸತ್ಯ ತಿಳಿದು ಸಮಾಜದ ಗೌರವ, ವಿಶ್ವಾಸಗಳಿಗೆ ಪಾತ್ರರಾಗುವರು. ನಿಜವಾದ ದೇಶಭಕ್ತರಲ್ಲಿ ಇಂತಹ ವಿರಾಟ್ ಸಂಸ್ಥೆಯನ್ನು ಕಟ್ಟುವ ಆಲೋಚನೆ ಬರಲೇಬೇಕು, ಭಾರತದ ಇಂದಿನ ಭೀಕರ ಸಮಸ್ಯೆಗಳಿಗೆ ಇದೆ ಪರಿಹಾರವಾಗಿದೆ.

**ಅಡಿಟಿಪ್ಪಣಿಗಳು**

1. ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ (ಭಾರತದ ಪುನರುತ್ಥಾನದ ಬಗೆಗೆ ಒಂದು ಮಹಾನ್ ಯೋಜನೆ) ಶ್ರೀ ಮಡಿಯಾಲ ನಾರಾಯಣ ಭಟ್, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ. 1974, ಪು.10
2. ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ (ಭಾರತದ ಪುನರುತ್ಥಾನದ ಬಗೆಗೆ ಒಂದು ಮಹಾನ್ ಯೋಜನೆ) ಶ್ರೀ ಮಡಿಯಾಲ ನಾರಾಯಣ ಭಟ್, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ. 1974, ಪು.17
3. ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ (ಭಾರತದ ಪುನರುತ್ಥಾನದ ಬಗೆಗೆ ಒಂದು ಮಹಾನ್ ಯೋಜನೆ) ಶ್ರೀ ಮಡಿಯಾಲ ನಾರಾಯಣ ಭಟ್, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ. 1974, ಪು.55
4. ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ (ಭಾರತದ ಪುನರುತ್ಥಾನದ ಬಗೆಗೆ ಒಂದು ಮಹಾನ್ ಯೋಜನೆ) ಶ್ರೀ ಮಡಿಯಾಲ ನಾರಾಯಣ ಭಟ್, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ. 1974, ಪು.60
5. ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ (ಭಾರತದ ಪುನರುತ್ಥಾನದ ಬಗೆಗೆ ಒಂದು ಮಹಾನ್ ಯೋಜನೆ) ಶ್ರೀ ಮಡಿಯಾಲ ನಾರಾಯಣ ಭಟ್, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ. 1974, ಪು.71
6. ವಿರಾಟ್ ರೂಪದ ಭಾರತೀಯ ಮಿಷನರಿ ಸಂಸ್ಥೆ (ಭಾರತದ ಪುನರುತ್ಥಾನದ ಬಗೆಗೆ ಒಂದು ಮಹಾನ್ ಯೋಜನೆ) ಶ್ರೀ ಮಡಿಯಾಲ ನಾರಾಯಣ ಭಟ್, ಶ್ರೀ ಸತ್ಯಸಾಯಿ ಲೋಕಸೇವಾ ಪ್ರಕಾಶನ, ಅಳಿಕೆ, ದಕ್ಷಿಣ ಕನ್ನಡ. 1974, ಪು.75